
• 4 ಮಿ. ಲೀ. ಡೈಕೋಫಾಲ್ 18.5 ಇ.ಸಿ. ಪ್ರತಿ ಲೀಟರ್ ನೀರಿನಲ್ಲಿ ಬೆರೆಸಿ ಎಳೆಕಾಯಿಗಳ ಮೇಲೆ ಸಿಂಪಡಿಸಬೇಕು.

**ಪ್ರಮುಖ ರೋಗಗಳು ಮತ್ತು ಅವುಗಳ ಸಮಗ್ರ ನಿರ್ವಹಣೆ**

**1. ತೆಂಗಿನಲ್ಲಿ ಕಾಂಡ ಸೋರುವ ರೋಗ:**


ಕಾಂಡ ಸೋರುವ ರೋಗ

ತಿಲವಿಯೋಪ್ಸಿಸ್ ಪ್ಯಾರಡಾಕ್ಸ್

**ರೋಗದ ಲಕ್ಷಣಗಳು :** ಪ್ರಾರಂಭದಲ್ಲಿ ಕಾಂಡದ ಕೆಳ ಭಾಗದಲ್ಲಿ ಬಿರುಕುಗಳುಂಟಾಗಿ ಕೆಂಪು ಮಿಶ್ರಿತ ಕಂದು ಬಣ್ಣದ ಅಂಟು ದ್ರವ ಸೋರುತ್ತಿರುತ್ತದೆ.

• ರೋಗ ತೀವ್ರವಾದಾಗ ಮೇಲ್ಭಾಗದಲ್ಲಿಯೂ (ನೆಲದಿಂದ 5–6 ಅಡಿ ಎತ್ತರದ ಕಾಂಡದಲ್ಲಿ) ಬಿರುಕುಗಳು ಕಾಣಿಸಿಕೊಂಡು ದೊಡ್ಡದಾಗಿ ಆ ಭಾಗದ ಅಂಗಾಂಶ ಕೊಳೆತು ಟೊಳ್ಳಾಗಿ, ಮರಗಳು ಕ್ರಮೇಣ ಹಳದಿ ಬಣ್ಣಕ್ಕೆ ತಿರುಗುತ್ತವೆ ಮತ್ತು ಹೂವು ಹಾಗೂ ಕಾಯಿಗಳು ಉದುರುತ್ತದೆ. ಈ ರೋಗ ತೀವ್ರವಾದಾಗ ಮರದ ಬೆಳವಣಿಗೆ ಕುಂಠಿತವಾಗಿ ಸುಳಿ ಸಣ್ಣದಾಗಿ ಇಳುವರಿ ಕಡಿಮೆಯಾಗುತ್ತದೆ.

• ರೋಗದ ತೀವ್ರತೆಯು ಜುಲೈಯಿಂದ–ನವೆಂಬರ್ ತಿಂಗಳುಗಳಲ್ಲಿ ಅಧಿಕವಾಗಿರುತ್ತದೆ.

**ನಿರ್ವಹಣಾ ಕ್ರಮಗಳು :** ಮರಗಳಿಗೆ ಗಾಯಗಳಾಗದಂತೆ ಎಚ್ಚರಿಕೆ ವಹಿಸಬೇಕು ಹಾಗೂ ಬೇಸಿಗೆ ಕಾಲದಲ್ಲಿ ನೀರನ್ನು ಪೂರೈಸುವುದು.


• ಕಾಂಡ ಸೋರುವ ಪ್ರದೇಶವನ್ನು ಹರಿತವಾದ ಉಪಕರಣದಿಂದ ಕೆತ್ತಿ, ಆ ಭಾಗಕ್ಕೆ ಬೋರ್ಡೊ ಪೇಷ್ಟನ್ನು ಅಥವಾ ಶೇ. 5 ರ (100 ಮಿ. ಲೀ. ನೀರಿನಲ್ಲಿ 5 ಮಿ. ಲೀ.) ಹೆಕ್ಸಾಕೋನಝೋಲ್‌ದ ದ್ರಾವಣವನ್ನು ಲೇಪಿಸಬೇಕು.

• 5 ಮಿ. ಲೀ. ಟ್ರೈಡೆಮಾರ್ಫ ಶಿಲೀಂಧ್ರನಾಶಕವನ್ನು 100 ಮಿ. ಲೀ. ನೀರಿನಲ್ಲಿ ಬೆರೆಸಿ ಬೇರಿನ ಮೂಲಕ ಕೊಡಬೇಕು. ಈ ರೀತಿ ಉಪಚಾರ ಮೂರು ತಿಂಗಳಿಗೊಮ್ಮೆ ವರ್ಷದಲ್ಲಿ ನಾಲ್ಕು ಸಲ ಮಾಡಬೇಕು ಅಥವಾ ರೋಗಗ್ರಸ್ಥ ಭಾಗದ ಮೇಲೆ ಟ್ರೈಕೋಡರ್ಮ ದ್ರಾವಣವನ್ನು ಲೇಪಿಸಬೇಕು.

• ಪ್ರತಿ ಗಿಡಕ್ಕೆ 5 ಕಿ. ಗ್ರಾಂ ನಂತೆ ಬೇವಿನ ಹಿಂಡಿಯನ್ನು ಹಾಕಬೇಕು. ಈ ಉಪಚಾರವನ್ನು ಏಪ್ರಿಲ್–ಮೇ, ಸೆಪ್ಟೆಂಬರ್–ಅಕ್ಟೋಬರ್ ಮತ್ತು ಜನವರಿ–ಫೆಬ್ರವರಿ ತಿಂಗಳುಗಳಲ್ಲಿ ಮಾಡಬೇಕು.

**ಸುಳಿ ಕೊಳೆ ರೋಗ :**





ಫೈಟಾಪ್ತೆರ ಪಾಮಿವೋರಾ

**ರೋಗದ ಲಕ್ಷಣಗಳು :** ಈ ರೋಗವು ಕಡಿಮೆ ಉಷ್ಣಾಂಶ ಹಾಗೂ ಹೆಚ್ಚು ಆರ್ದ್ರತೆ ಇರುವ ಪ್ರದೇಶಗಳಲ್ಲಿ ಕಂಡುಬರುತ್ತದೆ.

• ಪ್ರಾರಂಭದಲ್ಲಿ ಈ ಸೋಂಕು ಸುಳಿಯ ಬುಡ ಅಥವಾ ಸುಳಿಯಲ್ಲಿನ ಎಳೆಯ ಗರಿಗಳ ಬುಡದಲ್ಲಿ ಕಾಣಿಸಿಕೊಂಡು, ನಂತರ ಬಾಧೆಗೊಳಗಾಗಿರುವ ಗರಿಗಳು ಹಳದಿ ಬಣ್ಣಕ್ಕೆ ತಿರುಗುತ್ತವೆ.

• ಸುಳಿಯು ಬಾಡಿ ಗರಿಗಳು ಜೋತು ಬೀಳುತ್ತವೆ.

• ಸುಳಿಯಲ್ಲಿನ ಎಳೆಯ ಗರಿಗಳ ದಿಂಡು ಹಾಗೂ ಸುಳಿಯ ಮೃದುವಾದ ಭಾಗವು ಕೊಳೆತು ದುರ್ವಾಸನೆ ಬೀರುತ್ತದೆ.

• ಕೊಳೆತ ಸುಳಿಗಳನ್ನು ಹೊರಗೆಳೆದರೆ ಸುಲಭವಾಗಿ ಕಿತ್ತು ಬರುತ್ತವೆ.

• ರೋಗ ತೀವ್ರವಾದಲ್ಲಿ ಸಂಪೂರ್ಣ ಮರವೇ ಸಾಯುತ್ತದೆ.

**ನಿರ್ವಹಣಾ ಕ್ರಮಗಳು :** ಬಾಧೆಯಿಂದ ಸತ್ತ ಮರಗಳನ್ನು ಕಡಿದು ನಾಶಪಡಿಸಬೇಕು.

• ರೋಗ ಬಾಧಿಸಿದ ಮರದ ಭಾಗಗಳನ್ನು ಹರಿತ ಚೂರಿಯಿಂದ ಕತ್ತರಿಸಿ ತೆಗೆಯಬೇಕು ಹಾಗೂ ರೋಗ ಬಾಧಿಸಿದ ಭಾಗಕ್ಕೆ ಪ್ರತಿ ಲೀಟರ್ ನೀರಿಗೆ 2 ಗ್ರಾಂ ಮೆಟಲಾಕ್ಸಿಲ + ಮ್ಯಾಕೊಜೆಬ್ ಅಥವಾ 3 ಗ್ರಾಂ ತಾಮ್ರದ ಆಕ್ಸಿಕ್ಲೋರೈಡ್ ಅಥವಾ ಶೇ.1 ಬೋರ್ಡೋ ದ್ರಾವಣವನ್ನು ತಯಾರಿಸಿ ಸುಳಿ ಭಾಗಕ್ಕೆ ಸಿಂಪರಣೆ ಮಾಡುವುದು.

• ಹೆಚ್ಚು ಮಳೆಯಾಗುವ ಪ್ರದೇಶವಾಗಿದ್ದರೆ, ಶೇಕಡಾ 10 ರ ಬೋರ್ಡೋ ಪೇಸ್ಟನ್ನು (100 ಗ್ರಾಂ ಮೈಲುತುತ್ತು, 100 ಗ್ರಾಂ ಸುಣ್ಣವನ್ನು 500 ಮಿ. ಲೀ. ನೀರಿನಲ್ಲಿ ಪ್ರತ್ಯೇಕವಾಗಿ ಕರಗಿಸಿ ಅನಂತರ ಎರಡು ದ್ರಾವಣವನ್ನು ಒಟ್ಟಾಗಿ ಬೆರೆಸಿದಾಗ ಒಂದು ಲೀಟರ್ ಬೋರ್ಡೋ ಪೇಸ್ಟ್ ದೊರೆಯುತ್ತದೆ) ಲೇಪಿಸಬೇಕು ಅಥವಾ 3 ಗ್ರಾಂ ತಾಮ್ರದ ಆಕ್ಸಿಕ್ಲೋರೈಡ್‌ನ್ನು ತೆಳುವಾದ ಬಟ್ಟೆಯಲ್ಲಿ ಕಟ್ಟಿ ಸುಳಿ ಭಾಗಕ್ಕೆ ಇಡುವುದು.


• ಪ್ರತೀ ಮರಕ್ಕೆ ವರ್ಷಕ್ಕೆ 5 ಕಿ. ಗ್ರಾಂ ಬೇವಿನ ಹಿಂಡಿ ಮತ್ತು 50 ಗ್ರಾಂ ಟ್ರೈಕೋಡರ್ಮ ಅಥವಾ 50 ಗ್ರಾಂ ಸೂಡೋಮೊನಾಸ್ ಫ್ಲೋರೋಸೆನ್ಸ್ ನ್ನು 10 ಕಿ. ಗ್ರಾಂ ಕೊಟ್ಟಿಗೆ ಗೊಬ್ಬರದಲ್ಲಿ ಮಿಶ್ರಣ ಮಾಡಿ ಪ್ರತಿ ಮರಕ್ಕೆ ಹಾಕಬೇಕು.

**ಅಣಬೆ ರೋಗ/ ತಂಜಾವೂರು ಸೊರಗು ರೋಗ**

• ಬಾಧೆಗೆ ತುತ್ತಾದ ಸೊರಗಿದ ಎಲೆಗಳು ಕಂದು ಬಣ್ಣಕ್ಕೆ ತಿರುಗುವುದು, ಚಿಗುರು ಎಲೆಗಳು ಸುಕ್ಕುಗಟ್ಟುವುದು, ಕಾಂಡದ ಮೇಲೆ ಕೆಂಪು ರಸ ಸೋರಿದಂತಹ ಪಟ್ಟಿಗಳು ಕಂಡುಬರುವುದು.

• ಭೂಮಿಯ ಹತ್ತಿರದ ಕಾಂಡದ ಮೇಲೆ ಅಣಬೆಯಾಕಾರದ ಶಿಲೀಂಧ್ರದ ಬೆಳವಣಿಗೆ ಕಂಡು ಬರುತ್ತದೆ.

• ಬೇರುಗಳು ತೀವ್ರ ಬಾಧೆಗೊಳಗಾಗಿ, ಗಿಡಗಳ ಬೆಳವಣಿಗೆ ಹಾಗೂ ಇಳುವರಿ ಕಡಿಮೆಯಾಗುವುದು.





**ನಿರ್ವಹಣಾ ಕ್ರಮಗಳು :** ಅಣಬೆ ರೋಗಕ್ಕೆ ತುತ್ತಾದ ಗಿಡಗಳನ್ನು ತೆಗೆದು ಸುಡಬೇಕು.

• ಪ್ರತಿ ಗಿಡಕ್ಕೆ ಪ್ರತಿ ವರ್ಷ 50 ಕೆ.ಜಿ. ಕೊಟ್ಟಿಗೆ ಗೊಬ್ಬರ ಅಥವಾ ಹಸಿರೆಲೆ ಗೊಬ್ಬರವನ್ನು ಹಾಕಬೇಕು.

• ಶಿಫಾರಸ್ಸು ಮಾಡಿದ ಪ್ರಮಾಣದಲ್ಲಿ ರಸಾಯನಿಕ ಗೊಬ್ಬರಗಳನ್ನು ಸರಿಯಾದ ಸಮಯಕ್ಕೆ ನೀಡುವುದು.

• ತೋಟದಲ್ಲಿ ನೀರು ನಿಲ್ಲದಂತೆ ಬಸಿಗಾಲುವೆಗಳನ್ನು ನಿರ್ಮಿಸುವುದು.

• ವರ್ಷಕ್ಕೆ 5 ಕಿ. ಗ್ರಾಂ ಬೇವಿನ ಹಿಂಡಿ ಮತ್ತು 50 ಗ್ರಾಂ ಟ್ರೈಕೋಡರ್ಮ ವನ್ನು 10 ಕಿ. ಗ್ರಾಂ ಕೊಟ್ಟಿಗೆ ಗೊಬ್ಬರದಲ್ಲಿ ಮಿಶ್ರಣ ಮಾಡಿ ಪ್ರತೀ ಮರದ ಸುತ್ತಲೂ ಅಗೆದು ಬುಡಕ್ಕೆ ಹಾಕಬೇಕು. ರೋಗ ಬಾಧೆಯು ತೀವ್ರವಿದ್ದಾಗ ಇದನ್ನು 6 ತಿಂಗಳಿಗೊಮ್ಮೆ ತೆಂಗಿನ ಮರಕ್ಕೆ ಕೊಡಬೇಕು.

• ರೋಗ ತಗುಲಿದ ಗಿಡಗಳ ಸುತ್ತಲೂ ಗುಂಡಿಗಳನ್ನು (60 ಸೆಂ. ಮೀ. ಆಳ ಮತ್ತು 30 ಸೆಂ. ಮೀ. ಅಗಲ) ತೋಡಿ ಬೇರೆ ಗಿಡಗಳಿಗೆ ಹರಡದಂತೆ ನೋಡಿಕೊಳ್ಳಬೇಕು.

• ಬೇಸಿಗೆ ಕಾಲದಲ್ಲಿ ತೋಟದಲ್ಲಿ ಮಣ್ಣಿನ ತೇವಾಂಶ ಸಂರಕ್ಷಿಸುವುದು.

• ಬಾಳೆಯನ್ನು ಅಂತರ ಬೆಳೆಯಾಗಿ ಬೆಳೆಯುವುದರಿಂದ ರೋಗಾಣುಗಳ ಬೆಳವಣಿಗೆಯನ್ನು ತಡೆಯಬಹುದು.

• 30 ರಿಂದ 40 ಲೀ. ಶೇ. 1 ರ ಬೋರ್ಡೋ ದ್ರಾವಣದ ಮಿಶ್ರಣವನ್ನು ತೆಂಗಿನ ಮರದ ಸುತ್ತಲೂ ಹಾಕಬೇಕು.

• ಹೆಕ್ಸಕೊನಾಝೋಲ್ ಶೇಕಡಾ 2 ರ 100 ಮಿ.ಲೀ. ದ್ರಾವಣವನ್ನು ಬೇರಿನ ಮೂಲಕ ಕೊಡಬೇಕು.

ಪ್ರಕಟಣೆ: ರೈತರ ಆದಾಯ ಮತ್ತು ಕಲ್ಯಾಣವೃದ್ಧಿ ಯೋಜನೆ
ಕರ್ನಾಟಕ ಕೃಷಿ ಬೆಲೆ ಆಯೋಗ, ಕರ್ನಾಟಕ ಸರ್ಕಾರ, ಬೆಂಗಳೂರು

Technical Folder Series No. 29/2020

ICAR

ಕರ್ನಾಟಕ ಪಶುವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬೀದರ

ರೈತರ ಆದಾಯ ಮತ್ತು ಕಲ್ಯಾಣವೃದ್ಧಿ ಯೋಜನೆ
ಕರ್ನಾಟಕ ಕೃಷಿ ಬೆಲೆ ಆಯೋಗ, ಕರ್ನಾಟಕ ಸರ್ಕಾರ, ಬೆಂಗಳೂರು

# ತೆಂಗು ಬೆಳೆಯಲ್ಲಿ ಕೀಟ ಮತ್ತು ರೋಗಗಳ ನಿರ್ವಹಣೆ



ತಾಂತ್ರಿಕ ಮಾಹಿತಿ
ಡಾ. ಕೇದಾರನಾಥ
ಡಾ. ರಮೇಶ ಟಿ. ಜೆ.
ಶ್ರೀಮತಿ ಸಂಘಮಿತ್ರ ವಿ. ಕೆ.
ಡಾ. ರಶ್ಮಿ ಆರ್.
ಡಾ. ಚೇತನ್ ಎನ್.
ಡಾ. ನವೀನ್‌ಕುಮಾರ್ ಬಿ. ಟಿ.
ಡಾ. ಮಲ್ಲಿಕಾರ್ಜುನ ಎಲ್.

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ
ಹಿರಿಯ ವಿಜ್ಞಾನಿ ಮತ್ತು ಮುಖ್ಯಸ್ಥರು
ಭಾ. ಕೃ. ಅ. ಪ. – ಕೃಷಿ ವಿಜ್ಞಾನ ಕೇಂದ್ರ,
ಮೀನುಗಾರಿಕಾ ಕಾಲೇಜು ಆವರಣ, ಎಕ್ಕೂರು, ಕಂಕನಾಡಿ ಅಂಚೆ,
ಮಂಗಳೂರು, ದಕ್ಷಿಣ ಕನ್ನಡ – 575002
www.kvkdk.org, kvkdk@rediffmail.com, 0824–2431872

ಮಾರ್ಚ್, 2020

